# ಮಕ್ಕಳ ಬದ್ಧತಾ ಸ್ವೀಕಾರ ಪತ್ರ

**ರಿಗೆ,**

**ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರು/ನಿಲಯ ಪಾಲಕರು/ಮೆಲ್ವೀಚಾರಕರು**

**ಶಿಕ್ಷಣ ಸಂಸ್ಥೆಯ ಹೆಸರು/ವಿಳಾಸ:____________________________________**

1. ಭಾರತದ ಸಂವಿಧಾನ ಕಲಂ 12 ರಿಂದ 35 ರವರೆಗೆ ಹೇಳಿರುವ ಮೂಲಭೂತ ಹಕ್ಕುಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ. ಅವುಗಳು ನನಗೂ ಸಂಬಂಧಿಸಿದ್ದು ಹಾಗೂ ನಾನು ಅವುಗಳನ್ನು ಅನುಭವಿಸಲೇಬೇಕು, ಅದಕ್ಕೆ ಸಿದ್ಧನಿದ್ದೇನೆ. ***ಇಂದಿನ ಮಕ್ಕಳು ಇಂದಿನ ಪ್ರಜೆಗಳು*** (ಸಂವಿಧಾನ ಕಲಂ: 5) ಎಂಬ ಸತ್ಯದ ಅರಿವು ನನಗಿದೆ.
2. ಭಾರತದ ಸಂವಿಧಾನ ಕಲಂ 36 ರಿಂದ 51 ರವರೆಗೆ ಹೇಳಿರುವ ರಾಜ್ಯ ನಿರ್ದೇಶಾತ್ಮಕ ತತ್ವಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ ಮತ್ತು ಕಲಂ 51 ಎ ರಿಂದ 51 ಕೆ ರವರೆಗೆ ಹೇಳಿದ ಮೂಲಭೂತ ಕರ್ತವ್ಯಗಳ ಬಗ್ಗೆ ನಾನು ಅರಿತುಕೊಂಡಿದ್ದೇನೆ/ಕೊಳ್ಳುತ್ತೇನೆ ಹಾಗೂ ನಾನು ಅವುಗಳನ್ನು ಸದಾ ಪಾಲಿಸುತ್ತೇನೆ.
3. **ನವೆಂಬರ್ 20, 1989** ರಂದು ವಿಶ್ವಸಂಸ್ಥೆಯು ಜಾರಿಗೆ ತಂದಿರುವ **ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆಗೆ ಭಾರತ ಡಿಸೆಂಬರ್ 11, 1992 ರಂದು ಸಹಿ ಮಾಡಿದಂತೆ,** ಒಡಂಬಡಿಕೆಯಲ್ಲಿ ಹೇಳಿರುವ ಎಲ್ಲಾ ಮಕ್ಕಳ ಹಕ್ಕುಗಳನ್ನು, ಪ್ರಮುಖವಾಗಿ, ನಾಲ್ಕು ಮಕ್ಕಳ ಹಕ್ಕುಗಳ ಗುಂಪುಗಳಾದ ***ಬದುಕುವ ಹಕ್ಕುಗಳು, ರಕ್ಷಣೆಯ ಹಕ್ಕುಗಳು, ಅಭಿವೃದ್ಧಿ ಹೊಂದುವ ಹಕ್ಕುಗಳು ಹಾಗೂ ಭಾಗವಹಿಸುವ ಹಕ್ಕುಗಳನ್ನು,*** ನಾನು, ಅರಿತುಕೊಂಡು ಅನುಭವಿಸುತ್ತೇನೆ ಅದರಂತೆ ಪಾಲಿಸುತ್ತೇನೆ.
4. ಶಿಕ್ಷಣ, ನಮ್ಮ ಬದುಕಿನ ಜೀವನದುದ್ದಕ್ಕೂ ಕಲಿಯುವ ಒಂದು ನಿರಂತರ ಪ್ರಕ್ರಿಯೆ. ಶಿಕ್ಷಣದಿಂದಾಗಿ ನನ್ನ, ನನ್ನ ಕುಟುಂಬ ಹಾಗೂ ನಾನು ಓದಿದ ಶಾಲೆಯ ಅಥವಾ ಶಿಕ್ಷಣ ಸಂಸ್ಥೆಯ ಘನತೆ ಎತ್ತರಕ್ಕೆ ಹೋಗುತ್ತೆ ಹಾಗೂ ಶಿಕ್ಷಣದಿಂದ ನನ್ನ ಹಾಗೂ ನನ್ನ ಕುಟುಂಬ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಅರಿತುಕೊಂಡಿದ್ದೇನೆ.
5. ಶಿಕ್ಷಣ ಇರುವುದು ಕೇವಲ ಉದ್ಯೋಗ ಪಡೆದು ದುಡ್ಡು ಸಂಪಾದನೆ ಮಾಡೊದ್ದಕ್ಕೆ ಅಲ್ಲಾ!!. ***ಶಿಕ್ಷಣ ಸಮಾಜದಲ್ಲಿ ಅನ್ಯಾಯ, ಶೋಷಣೆ, ಹಿಂಸೆ, ದೌರ್ಜನ್ಯ, ಅಸಮಾನತೆ, ತಾರತಮ್ಯ, ನಿರ್ಲಕ್ಷ್ಯ, ಮೋಸ ಹಾಗೂ ವಂಚನೆಗಳಿಗೆ ಬಲಿಯಾಗದೆ, ಸಮಾಜದಲ್ಲಿ ಶ್ರೇಷ್ಠ ನಾಗರಿಕರಾಗಿ, ಯಾವುದೇ ವೃತ್ತಿಯನ್ನು ಘನತೆಯಿಂದ ಮಾಡುತ್ತಾ, ಸಮಾಜಕ್ಕೆ ಕೊಡುಗೆ ನೀಡುತ್ತಾ, ಸ್ವಾತಂತ್ರ್ಯ, ಸಮಾನತೆಯೊಂದಿಗೆ, ಘನತೆಯಿಂದ, ಸ್ವಾಭಿಮಾನದಿಂದ ಕುಟುಂಬದೊಂದಿಗೆ ಬದುಕಿ, ಅಭಿವೃದ್ಧಿ ಹೊಂದುವುದಕ್ಕೆ*** ಎಂಬುದು ನನಗೆ ಗೊತ್ತಿದೆ.
6. ನಾನು ಎಲ್ಲಾ ರೀತಿಯ ಶೋಷಣೆ, ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳ ವಂಚನೆ, ಮಾದಕ ವ್ಯಸನಗಳಿಂದ ಮುಕ್ತವಾಗಿರುತ್ತೇನೆ. ನಾನು ಸೈಬರ್ ಮೋಸಗಳಿಗೆ ಮತ್ತು ಎಲ್ಲಾ ರೀತಿಯ ಜಾಲತಾಣ ಹಾಗೂ ಇತರೇ ಬೆದರಿಸುವ ಕೃತ್ಯಗಳಿಗೆ ಬಲಿಯಾಗುವುದಿಲ್ಲ ಅವುಗಳಿಂದ ದೂರವಿದ್ದು ಸುರಕ್ಷತೆಯನ್ನು ಅರಿತು, ಅವುಗಳನ್ನು ಎದುರಿಸುವ ಜ್ಞಾನ ಹಾಗೂ ಕೌಶಲ್ಯ ಪಡೆದು, ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತೇನೆ.
7. ನನಗೆ ಮತ್ತು ನನ್ನ ಕುಟುಂಬದಲ್ಲಿ ಯಾವುದೇ **ಬಾಲ್ಯ ವಿವಾಹದ** ಯೋಚನೆ, ಸಿದ್ಧತೆ ಅಥವಾ ಯೋಜಿಸಿದಲ್ಲಿ ನಾನು ಅದನ್ನು ವಿರೋಧಿಸುತ್ತೇನೆ. ನನ್ನ ಕುಟುಂಬದವರಿಗೆ, ಪೋಷಕರಿಗೆ, ಸಮುದಾಯಕ್ಕೆ ಬಾಲ್ಯ ವಿವಾಹದ ಪರಿಣಾಮಗಳ ಬಗ್ಗೆ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಬಗ್ಗೆ ಅರಿವು ಮೂಡಿಸುತ್ತೇನೆ. ಯಾವುದೇ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿಸಿದವರಿಗೆ ಅಥವಾ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ.

*(ಮದುವೆಗೆ, ಹೆಣ್ಣಿಗೆ 18 ವರ್ಷ ಹಾಗೂ ಗಂಡಿಗೆ 21 ವರ್ಷ ಪೂರ್ಣಗೊಂಡಿರಬೇಕು. ಬಾಲ್ಯ ವಿವಾಹ ಮಾಡಿದ ತಂದೆ–ತಾಯಿ, ಪೋಷಕರು/ಮಾಡಿಸಿದ/ಮಾಡಿದ/ಸಹಕರಿಸಿದ/ಬೆಂಬಲಿಸಿದ/ಮದುವೆ ಕಾಗದ ಮುದ್ರಿಸಿದವರು/ ಅಡುಗೆಯವರು/ ಪೂಜಾರಿ/ಮಂಟಪದವರು/ವಾಲಗದವರು/ಶಾಮಿಯಾನದವರು/ಮೈಕ್ ಸೆಟ್‌ನವರು/ಫೋಟೊ–ವಿಡಿಯೋದವರು/ ಭಾಗವಹಿಸಿದವರು/ಹಾಜರಾದವರೆಲ್ಲರಿಗೂ "ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಹಾಗೂ ಕರ್ನಾಟಕ ತಿದ್ದುಪಡಿ–2016 ರ ಪ್ರಕಾರ ರೂ. 1 ಲಕ್ಷ ತನಕ ದಂಡ ಹಾಗೂ ಕನಿಷ್ಟ 1 ವರ್ಷ ದಿಂದ 2 ವರ್ಷದ ತನಕ ಜೈಲು ಶಿಕ್ಷೆ ಇದೆ.)*

8. **ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯಂತಹ** ಯಾವುದೇ ಅಭಿವೃದ್ಧಿ ಮಾರಕ ಪಿಡುಗುಗಳಿಗೆ ನಾನು ಒಳಗಾಗುವುದಿಲ್ಲ. ನನ್ನ ಕುಟುಂಬದಲ್ಲಿ ಅದಕ್ಕೆ ಅವಕಾಶ ನೀಡುವುದಿಲ್ಲ. ಒಂದುವೇಳೆ ಪ್ರಕರಣಗಳು ಕಂಡುಬಂದರೆ ಸಂಬಂಧಿಸಿದವರಿಗೆ ಅಥವಾ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ. ***(14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕ್ಷೇತ್ರದಲ್ಲಿ ತಂದೆ/ತಾಯಿ/ಪೋಷಕರೂ ಸೇರಿದಂತೆ ಯಾರೂ ಕೂಡಾ ದುಡಿಸಿಕೊಳ್ಳುವುದು ಸಂಪೂರ್ಣ ನಿಷೇಧ. 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ಕೂಡಾ ಸಂಪೂರ್ಣ ನಿಷೇಧ. ಹದಿನೆಂಟು (18) ವರ್ಷದೊಳಗಿನ ಮಕ್ಕಳನ್ನು ದುಡಿಸಿದಲ್ಲಿ "ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986, ತಿದ್ದುಪಡಿ–2016" ರ ಪ್ರಕಾರ ರೂ. 50 ಸಾವಿರ ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ಇದೆ.)***

9. ಮಕ್ಕಳ ಮೇಲೆ ನಡೆಯುವ ಯಾವುದೇ ರೀತಿಯ ಹಿಂಸೆ, ಶೋಷಣೆ, ದೌರ್ಜನ್ಯ, ತಾರತಮ್ಯ, ನಿರ್ಲಕ್ಷ್ಯ, **ಲೈಂಗಿಕ ಶೋಷಣೆಗಳ** ಬಗ್ಗೆ ನಾನು ಜಾಗೃತನಾಗಿರುತ್ತೇನೆ ಹಾಗೂ ಅವುಗಳಿಗೆ ಬಲಿಯಾಗುವುದಿಲ್ಲ. ನನ್ನ **ಸ್ವ ರಕ್ಷಣೆಯ** ಹಿನ್ನೆಲೆಯಲ್ಲಿ **ಸುರಕ್ಷಿತ ಸ್ಪರ್ಶ ಹಾಗೂ ಅಸುರಕ್ಷಿತ ಸ್ಪರ್ಶದ** ಬಗ್ಗೆ ಅರಿತುಕೊಳ್ಳುತ್ತೇನೆ. ಎಲ್ಲಿಯಾದರೂ ಕಂಡುಬಂದರೆ ಸಂಬಂಧಿಸಿದವರಿಗೆ ಅಥವಾ 1098 ಕ್ಕೆ ಧೈರ್ಯವಾಗಿ ದೂರು ನೀಡುತ್ತೇನೆ. **(18 ವರ್ಷದೊಳಗಿನ ಮಕ್ಕಳ ಮೇಲೆ ಲೈಂಗಿಕ ಶೋಷಣೆ/ಅಪರಾಧ ಮಾಡಿದಲ್ಲಿ "ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ತಿದ್ದುಪಡಿ 2019"ರ (POCSO Act) ಪ್ರಕಾರ ಕನಿಷ್ಟ 10 ರಿಂದ 20 ವರ್ಷ ಜೈಲು ಅಥವಾ ಗಲ್ಲು ಶಿಕ್ಷೆ ಇದೆ.)**

**ತಂದೆ/ತಾಯಿ/ಪೋಷಕರ ಸಹಿ:**____________________ **ಮಗುವಿನ ಸಹಿ:**______________
ತಂದೆ/ತಾಯಿ/ಪೋಷಕರ ಹೆಸರು:____________________ ಹೆಸರು:____________________
ದಿನಾಂಕ:______________ **ತರಗತಿ:**___________
**ತಂದೆ/ತಾಯಿ/ಪೋಷಕರ** ವಿಳಾಸ ಹಾಗೂ ದೂರವಾಣಿ ಸಂಖ್ಯೆ:______________________________
________________________________________________________________

**––:ಸೂಚನೆಗಳು:––**

**1. ಶಾಲೆ/ಶಿಕ್ಷಣ ಸಂಸ್ಥೆ/ವಸತಿ ನಿಲಯ/ಪಿ.ಯು ಕಾಲೇಜುಗಳಲ್ಲಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಂತೆ ಮಕ್ಕಳ ಹಕ್ಕುಗಳು, ಮಕ್ಕಳ ಸಂರಕ್ಷಣೆ ಹಾಗೂ ಮಕ್ಕಳ ಅಭಿವೃದ್ಧಿಗಾಗಿ, 18 ವರ್ಷದೊಳಗಿನ ಮಕ್ಕಳಿರುವ ಎಲ್ಲಾ ಮಕ್ಕಳ ಶಿಕ್ಷಣ ಸಂಸ್ಥೆ/ಕೇಂದ್ರದ ಮಕ್ಕಳು ಬರೆದು ಕೊಡಬೇಕಾದ ಬದ್ಧತಾ ಪತ್ರ. ನಮೂನೆ ಇದಾಗಿದೆ.**

*2. ಈ ಬದ್ಧತಾ ಪತ್ರವನ್ನು ನಿಮ್ಮ ಶಾಲೆ/ಶಿಕ್ಷಣ ಸಂಸ್ಥೆ/ವಸತಿ ನಿಲಯ/ಪಿ.ಯು. ಕಾಲೇಜು ಅಥವಾ ಯಾವುದೇ 18 ವರ್ಷದೊಳಗಿನ ಮಕ್ಕಳಿರುವ ಶಿಕ್ಷಣ ಕೇಂದ್ರದ ಮಕ್ಕಳಿಗೆ ಓದಿ ತಿಳಿಸಿ, ಈ ಬಗ್ಗೆ ಒಂದು ದಿನ ತರಬೇತಿ ನೀಡಿ ದ್ವಿಪ್ರತಿಯಲ್ಲಿ ನೀಡಬೇಕು. ಎರಡೂ ಪ್ರತಿಯನ್ನು ಮಕ್ಕಳು ಮನೆಗೆ ತೆಗೆದುಕೊಂಡು ಹೋಗಿ ಕುಟುಂಬದಲ್ಲಿ ಓದಿಸಿ, ಎರಡೂ ಪ್ರತಿಗೆ ತಂದೆ/ತಾಯಿ ಅಥವಾ ಪೋಷಕರಿಂದ ಸಹಿ ಮಾಡಿಸಿ, ಮಕ್ಕಳೂ ಸಹಿ ಮಾಡಿ, ಒಂದು ಪ್ರತಿಯನ್ನು ಮನೆಯಲ್ಲಿ ಜೋಪಾನವಾಗಿ ಇಡಬೇಕು, ಇನ್ನೊಂದು ಪ್ರತಿಯನ್ನು ಮರು ದಿವಸ ಶಾಲೆಯ/ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಗೆ ನೀಡಬೇಕು.*

*3. ಈ ಬದ್ಧತಾ ಪತ್ರವನ್ನು 6ನೇ ತರಗತಿಯಿಂದ ದ್ವಿತೀಯ ವರ್ಷದ ಪಿ.ಯು.ಸಿ ಯ ವಿದ್ಯಾರ್ಥಿಗಳವರೆಗೆ, ಅಂದರೆ 18 ವರ್ಷದೊಳಗಿನ ಎಲ್ಲಾ ಮಕ್ಕಳಿಂದ ಆಯಾ ಸಂಸ್ಥೆಯ ಮುಖ್ಯಸ್ಥರು ಕಡ್ಡಾಯವಾಗಿ ಪಡೆದುಕೊಳ್ಳುವ ಮೂಲಕ ಮಕ್ಕಳಲ್ಲಿ ಜಾಗೃತಿ/ಅರಿವು/ ಎಚ್ಚರಿಕೆ ಮೂಡಿಸಬೇಕು. (1 ರಿಂದ 5ನೇ ತರಗತಿ ಮಕ್ಕಳಿಗೆ ಶಿಕ್ಷಕರೇ ಓದಿ ಮಕ್ಕಳಿಗೆ ಸಂಕ್ಷಿಪ್ತವಾಗಿ ಅರ್ಥೈಸಿದ ನಂತರ, ಪೋಷಕರ ಹಾಗೂ ಮಕ್ಕಳ ಸಹಿ ಪಡೆಯಲು ಕ್ರಮ ಕೈಗೊಳ್ಳುವುದು ಅಥವಾ ಪ್ರತ್ಯೇಕ ಸರಳ ಕ್ರಮ ಅನುಸರಿಸುವುದು)*